# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :201
ಸದಸ್ಯರ ಹೆಸರು :ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ)
ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು
ಉತ್ತರಿಸುವ ದಿನಾಂಕ :05.03.2025

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಜಿಲ್ಲಾಧಿಕಾರಿ ಮಂಡ್ಯರವರಿಂದ 'ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅಮೃತ ಭವನ'ವನ್ನು ಮಂಡ್ಯ ನಗರದಲ್ಲಿ ನಿರ್ಮಿಸಲು ಕೋರಿ ಸರ್ಕಾರಕ್ಕೆ ಯಾವ ವರ್ಷ ಪ್ರಸ್ತಾವನೆ ಸಲ್ಲಿಸಲಾಗಿದೆ: (ಅಂದಾಜು ಪಟ್ಟಿ ಮತ್ತು ನಕ್ಷೆಯನ್ನು ಒಳಗೊಂಡ ಸವಿವರದ ಪ್ರಸ್ತಾವನೆ ಪ್ರತಿ ನೀಡುವುದು) | ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅಮೃತ ಭವನವನ್ನು ಮಂಡ್ಯ ನಗರದಲ್ಲಿ ನಿರ್ಮಿಸಲು ದಿನಾಂಕ:22.12.2015 ಹಾಗೂ ದಿನಾಂಕ:17.07.2021 ರಂದು ಸ್ಥಳ ಗುರುತಿಸಿ, ಪ್ರಸ್ತಾವನೆಗಳು ಸ್ವೀಕೃತವಾಗಿರುತ್ತವೆ. |
| ಆ) | ಸದರಿ ಪ್ರಸ್ತಾವನೆಗೆ ಸರ್ಕಾರ ಅನುಮೋದನೆ ನೀಡಿದೆಯೇ: (ಇದ್ದಲ್ಲಿ, ಆದೇಶದ ಪ್ರತಿ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಕಂಇ 54 ಡಬ್ಲ್ಯೂಬಿಆರ್2015, ದಿನಾಂಕ:17.05.2016ರ ಆದೇಶದಲ್ಲಿ ರೂ.4.00 ಕೋಟಿಗಳಿಗೆ ತಾತ್ವಿಕ ಅನುಮೋದನೆ ನೀಡಲಾಗಿರುತ್ತದೆ. |
| ಇ) | ಮಂಡ್ಯ ಜಿಲ್ಲೆ ಅಮೃತ ಮಹೋತ್ಸವ ಆಚರಿಸಿಕೊಂಡು 9 ವರ್ಷಗಳು ಕಳೆದಿದ್ದರೂ, ಇದುವರೆವಿಗೂ ಸದರಿ ಪ್ರಸ್ತಾವನೆಗೆ ಅನುಮೋದನೆ ಮತ್ತು ಅನುದಾನ ನೀಡದೇ ವಿಳಂಬವಾಗಿರುವುದಕ್ಕೆ ಇರುವ ಕಾರಣಗಳೇನು: | ಮಂಡ್ಯ ನಗರಸಭಾ ವ್ಯಾಪ್ತಿಯ ಗ್ರಾಮಠಾಣಾ ಆಸ್ತಿ ಸಂಖ್ಯೆ:614/625 ರಲ್ಲಿ 0.06 ಗುಂಟೆ ಜಾಗವನ್ನು ಈ ಹಿಂದೆ ಗುರುತಿಸಿ ಪ್ರಸ್ತಾವನೆ ಸ್ವೀಕೃತವಾಗಿತ್ತು.<br><br>ತದನಂತರ, ಮಂಡ್ಯ ನಗರದಲ್ಲಿ ಬಾಡಿಗೆ ಕಟ್ಟಡಗಳಲ್ಲಿ ಕಛೇರಿ ನಡೆಸುತ್ತಿರುವ ಎಲ್ಲಾ ಇಲಾಖಾ ಕಛೇರಿಗಳು ಹಾಗೂ ಮಾನ್ಯ ಶಾಸಕರು ವಿಧಾನಸಭೆ/ವಿಧಾನ ಪರಿಷತ್ತುರವರ ಕೊಠಡಿಗಳಿಗೂ ಸಹ ಸದರಿ ಜಾಗದಲ್ಲಿ ಸ್ಥಳಾವಕಾಶ ಕಲ್ಪಿಸಲು ಸಾಧ್ಯವಾಗದ ಕಾರಣ ಮಂಡ್ಯ ನಗರದ ಜಿಲ್ಲಾಧಿಕಾರಿಗಳ ಕಛೇರಿ ಹತ್ತಿರದಲ್ಲಿರುವ ಸ.ನಂ.154 ರಲ್ಲಿ 1.08 ಎಕರೆ ಹಳೆ ತಾಲ್ಲೂಕು ಕಛೇರಿ ಜಾಗವನ್ನು ಗುರುತಿಸಲಾಗಿದ್ದು, ಲೋಕೋಪಯೋಗಿ ಇಲಾಖೆಯವರಿಗೆ DPR Line Estimate ಸಲ್ಲಿಸುವಂತೆ ಜಿಲ್ಲಾಧಿಕಾರಿಗಳು ಸೂಚಿಸಿರುವುದಾಗಿ ವರದಿ ಮಾಡಿರುತ್ತಾರೆ.<br><br>ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆ ಸ್ವೀಕೃತವಾದ ನಂತರ ನಿಯಮಾನುಸಾರ ಪರಿಶೀಲಿಸಲಾಗುವುದು. |
| ಈ) | ಅಮೃತ ಭವನ ನಿರ್ಮಾಣಕ್ಕೆ ಅನುದಾನ ಒದಗಿಸುವ ಕುರಿತು ಸರ್ಕಾರದ ಸ್ಪಷ್ಟ ನಿಲುವೇನು: ಅಮೃತ ಭವನ ನಿರ್ಮಾಣ ಕಾಮಗಾರಿ ಆರಂಭಗೊಳ್ಳುವುದು ಯಾವಾಗ: (ಸಂಪೂರ್ಣ ವಿವರ ನೀಡುವುದು) | |
| ಉ) | ಮಂಡ್ಯ ನಗರದಲ್ಲಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅಮೃತ ಭವನವನ್ನು ನಿರ್ಮಿಸಲು ಸ್ಥಳ ಗುರುತಿಸಲಾಗಿದೆಯೇ: ಇದ್ದಲ್ಲಿ, ಸ್ಥಳ ಮತ್ತು ಸ್ಥಳದ ವಿಸ್ತೀರ್ಣ ಹಾಗೂ ಅಂದಾಜು ವೆಚ್ಚವೆಷ್ಟು? (ಸಂಪೂರ್ಣ ಮಾಹಿತಿ ನೀಡುವುದು) | |

**ಕಂಇ 11 ಡಬ್ಲ್ಯೂಬಿಆರ್ 2025**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು